KADK010019002018

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
# ದಕ್ಷಿಣ ಕನ್ನಡ, ಮಂಗಳೂರು.

## ಸ್ಪೆಷಲ್ ಕೇಸ್ ನಂಬ್ರಃ 73/2018

| | | |
|---|---|---|
| ಆರೋಪಿಯ ಹೆಸರು | : | 1) ಪ್ರಸಾದ್ ಕಡ್ತಿಲ |
| ತಂದೆಯ ಹೆಸರು | : | ಬಾಬು ಪೂಜಾರಿ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಕೃಷಿ |
| ವಾಸಸ್ಥಳ | | ಕಡ್ತಿಲ ಮನೆ,<br>ಮೊಗ್ರು ಗ್ರಾಮ ಮತ್ತು ಅಂಚೆ,<br>ಬೆಳ್ತಂಗಡಿ ಗ್ರಾಮ ತಾಲುಕು-574 241. |

### ಭಾರತ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರ ಪ್ರಕಾರ ಆರೋಪಿಯ ಹೇಳಿಕೆ

ಪ್ರ.ನಂಃ 1 ಈ ಪ್ರಕರಣದಲ್ಲಿ ಅಭಿಯೋಜನೆಯ ಪರ ನ್ಯಾಯಾಲಯದಲ್ಲಿ ಮಾಡಿದ ಸಾಕ್ಷಿಗಳ ವಿಚಾರಣೆಯನ್ನು ಕೇಳಿದ್ದೀರಾ?

ಉತ್ತರಃ ಕೇಳಿದ್ದೇನೆ

ಪ್ರ.ನಂಃ 2 ಫ್ರಾಸಾ-1- ಶ್ರೀಮತಿ ಆರ್. ಪದ್ಮಶ್ರೀ, ಭೂವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬೀದರ್ ಇವರು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ಬೆಳ್ತಂಗಡಿ ತಾಲೂಕಿನ ಮೊಗ್ರು ಗ್ರಾಮ ಮಂಗಳೂರಿನ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ವ್ಯಾಪ್ತಿಯಲ್ಲಿದ್ದು, ಈ ಕೇಸಿನ ಆರೋಪಿಗಳ ಪರಿಚಯವಿದ್ದು, 1 ನೇ ಆರೋಪಿಯಾದ ನೀವು ಕಲ್ಲು ಗಣಿ ಗುತ್ತಿಗೆದಾರರಾಗಿದ್ದು, ದಿನಾಂಕಃ 05.06.2009 ರಿಂದ ಐದು ವರ್ಷಗಳ ಅವಧಿಗೆ ಮೊಗ್ರು ಗ್ರಾಮ ಸರ್ವೆ ನಂಬ್ರ 72/1 ಒಂದು ಎಕ್ರೆ ಜಮೀನಿನಲ್ಲಿ ಕಲ್ಲು ಗಣಿಗಾರಿಕೆ ನಡೆಸಲು ತಮ್ಮ ಇಲಾಖೆಯ ಉಪ ನಿರ್ದೇಶಕರು ಲೈಸೆನ್ಸ್ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 3 ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ಸರ್ವೇ ನಂಬ್ರ 72/1P1 ರ 20 ಸೆಂಟ್ಸ್ ಜಮೀನಿನಲ್ಲಿ ಪ್ರಕಾಶ್ ಕಡ್ತಿಲ ಅನ್ನುವವರಿಗೆ ದಿನಾಂಕಃ05.08.2008 ರಿಂದ ಐದು ವರ್ಷಗಳ ಅವಧಿಗೆ ಕಲ್ಲು ಗಣಿ ನಡೆಸಲು ಗುತ್ತಿಗೆ ನೀಡಲಾಗಿದ್ದು, ಗುತ್ತಿಗೆ ಅವಧಿ 2013 ರಲ್ಲಿ ಮುಗಿದಿದ್ದು ನಂತರ ಅವರು ಗುತ್ತಿಗೆಯನ್ನು ನವೀಕರಿಸಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ4 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ಈ ಪ್ರಕರಣದ 2 ನೇ ಆರೋಪಿ ಸರ್ವೇ ನಂಬ್ರ 72/1 ಇದರಲ್ಲಿ ಕಲ್ಲು ಪುಡಿ ಮಾಡುವ ಘಟಕ ಸ್ಥಾಪಿಸಲು ಅನುಮತಿ ಕೇಳಿ ತಮ್ಮ ಇಲಾಖೆಗೆ ಅರ್ಜಿ ಸಲ್ಲಿಸಿದ್ದು, ಆ ಅರ್ಜಿಯನ್ನು ದಿನಾಂಕಃ15.12.2014 ರಂದು ತಿರಸ್ಕರಿಸಲಾಗಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 5 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ 1 ನೇ ಆರೋಪಿಯಾದ ನಿಮಗೆ ನೀಡಿದ್ದ ಕಲ್ಲು ಗಣಿ ಗುತ್ತಿಗೆಯನ್ನು ತಮ್ಮ ಇಲಾಖೆಯ ಉಪ ನಿರ್ದೇಶಕರು ಸದರಿ ಪ್ರದೇಶ ಅರಣ್ಯ ಬಫರ್ ಪ್ರದೇಶದಲ್ಲಿ ಬರುತ್ತದೆ ಎನ್ನುವ ಕಾರಣದಿಂದಾಗಿ ದಿನಾಂಕಃ 23.03.2013 ರಂದು ರದ್ದುಗೊಳಿಸಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ 6 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ಕಲ್ಲು ಗಣಿ ಗುತ್ತಿಗೆ ರದ್ದುಗೊಳಿಸಿದ್ದರ ವಿರುದ್ಧ 1 ನೇ ಆರೋಪಿಯಾದ ನೀವು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಜಂಟಿ ನಿರ್ದೇಶಕರ ಕಚೇರಿಗೆ ಪರಿಷ್ಕರಣಾ ಅರ್ಜಿ ಸಲ್ಲಿಸಿದ್ದು ಅದನ್ನು ಮಾನ್ಯ ಮಾಡಿ ಜಂಟಿ ನಿರ್ದೇಶಕರು 05.09.2014 ರಂದು ಕಲ್ಲು ಗಣಿ ಗುತ್ತಿಗೆಯನ್ನು ನವೀಕರಿಸಲು ಆದೇಶಿಸಿದ್ದು, ಆದರೆ 1 ನೇ ಆರೋಪಿಯಾದ ನೀವು ಕಲ್ಲು ಗಣಿ ಗುತ್ತಿಗೆಯನ್ನು ನವೀಕರಿಸಿಕೊಂಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ7 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ದಿನಾಂಕಃ21.05.2014 ರಂದು ತಾನು ಸರ್ವೆ ನಂಬ್ರ 72/1 ಕ್ಕೆ ಭೇಟಿ

ನೀಡಿ ಪರಿಶೀಲನೆ ಮಾಡಿದಾಗ ಅಲ್ಲಿ ಕಲ್ಲು ಗಣಿಗಾರಿಕೆ ನಡೆಯುತ್ತಿದ್ದು, ಅದಕ್ಕಾಗಿ ತಾನು ರೂ.12,05,000/- ದಂಡ ವಿಧಿಸಿ 1 ನೇ ಆರೋಪಿಯಾದ ನಿಮಗೆ ನೋಟೀಸ್ ಜಾರಿ ಮಾಡಿದ್ದು, ಆದರೆ ಆರೋಪಿ ರೂ.1,00,000/- (ರೂ.50,000 + ರೂ. 50,000) ಮಾತ್ರ ದಂಡ ತುಂಬಿರುತ್ತಾನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ8 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ 2017 ನೇ ಇಸವಿವರೆಗೆ 1 ನೇ ಆರೋಪಿಯಾದ ನೀವು ಸರ್ವೇ ನಂಬ್ರ 72/1 ಮತ್ತು 72/1P1 ಇದರಲ್ಲಿ ಕಲ್ಲು ಗಣಿಗಾರಿಕೆ ಮುಂದುವರೆಸಿದ್ದು, ದಿನಾಂಕಃ 03.03.2017 ರಂದು ಸರ್ವೇ ನಂಬ್ರ 72/1P1 ಇದರಲ್ಲಿ ಕಲ್ಲು ಗಣಿಗಾರಿಕೆ ಮಾಡಿದ್ದಕ್ಕಾಗಿ 1 ನೇ ಆರೋಪಿಯಾದ ನಿಮಗೆ ರೂ.3,60,000/- ದಂಡ ವಿಧಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ 9 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ 2 ನೇ ಆರೋಪಿ ಕಲ್ಲು ಪುಡಿ ಮಾಡುವ ಘಟಕ ನಡೆಸಲು ಅನುಮತಿ ನೀಡದೇ ಇದ್ದರೂ 2017 ನೇ ಇಸವಿವರೆಗೆ ಕಲ್ಲು ಪುಡಿ ಮಾಡುವುದನ್ನು ಮುಂದುವರೆಸಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ10 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ದಿನಾಂಕಃ 01.07.2017 ರಂದು ಸರ್ವೇ ನಂಬ್ರ 62/1, 72/1, 72/1P1 ಜಮೀನಿಗೆ ಕರ್ನಾಟಕ ಉಪ ಲೋಕಾಯುಕ್ತ ಭೇಟಿ ನೀಡಿದ್ದು, ಆ ಸಮಯದಲ್ಲಿ ಗಣಿ ಇಲಾಖೆ, ಅರಣ್ಯ ಇಲಾಖೆ, ಸರ್ವೇ ಇಲಾಖೆ, ಕಂದಾಯ ಇಲಾಖೆ ಅಧಿಕಾರಿಗಳು ಹಾಗೂ ಕಲ್ಲು ಗಣಿಗಾರಿಕೆ ಮತ್ತು ಕಲ್ಲು ಪುಡಿ ಮಾಡುವವರು ಅಂದರೆ 1 ನೇ ಆರೋಪಿಯಾದ ನೀವು ಹಾಗೂ 2 ನೇ ಆರೋಪಿ ಇದ್ದಿರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ11 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ಸರ್ವೇ ನಂಬ್ರ 62/1 ಜಮೀನಿನಲ್ಲಿ ಕಲ್ಲು ಪುಡಿ ಮಾಡುವ ಕೆಲಸ ನಡೆಯುತ್ತಿದ್ದು, 2014 ನೇ ಇಸವಿಯಲ್ಲಿ ಅನುಮತಿ ಕೋರಿ 2 ನೇ ಆರೋಪಿ ಸಲ್ಲಿಸಿದ ಅರ್ಜಿ ವಜಾಗೊಳಿಸಲಾಗಿದ್ದು, ಅಲ್ಲಿ 200MT soling, 100 MT 40 mm jelly, 300 MT 20 mm jelly, 10 MT dust, KA-16-A-5020 ನೋಂದಣಿ ಸಂಖ್ಯೆಯ ಟಿಪ್ಪರ್ ಲಾರಿ, JS-140 excavator, PC-71 excavator ಇದ್ದು ಅವುಗಳನ್ನು ವಶಪಡಿಸಿಕೊಂಡು ಅಲ್ಲಿಯೇ ಬಿಟ್ಟು ಬಂದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ12 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ಉಪ ಲೋಕಾಯುಕ್ತ ಇವರು ಕಲ್ಲು ಗಣಿ ಮಾಡುವವರು ಮತ್ತು ಕಲ್ಲು ಪುಡಿ ಮಾಡುವವರು ಅಂದರೆ 1 ನೇ ಆರೋಪಿಯಾದ ನೀವು ಹಾಗೂ 2 ನೇ ಆರೋಪಿ ವಿರುದ್ಧ ಕ್ರಮ ತೆಗೆದುಕೊಳ್ಳಲು ಆದೇಶಿಸಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ 13 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ದಿನಾಂಕಃ 10.07.2017 ರಂದು ಅರಣ್ಯ ಇಲಾಖೆಯಿಂದ ಆನಂದ ರಾಥೋಡ್, ಕಂದಾಯ ಇಲಾಖೆಯ ಪ್ರತೀಶ್, ಸರ್ವೇ ಇಲಾಖೆಯಿಂದ ಪ್ರಕಾಶ್ ಮತ್ತು ಗಣಿ ಇಲಾಖೆಯಿಂದ ತಾನು ಬೆಳಿಗ್ಗೆ 9.00 ಗಂಟೆಗೆ ಹೋದಾಗ ತಾವು ವಶಪಡಿಸಿಕೊಂಡಿದ್ದ ವಸ್ತುಗಳು ಅಲ್ಲಿಯೇ ಇದ್ದವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ 14 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ಸದರಿ ವಶಪಡಿಸಿಕೊಂಡಿದ್ದ ವಸ್ತುಗಳ ಕುರಿತಾಗಿ ದಿನಾಂಕಃ10.07.2017 ರಂದು ನಿಪಿ-1 ರಂತೆ ಮಹಜರು ಮಾಡಿದ್ದು, ಸದರಿ ಮಹಜರಿನಲ್ಲಿರುವ ತನ್ನ ಸಹಿಯು ನಿಪಿ-1(ಎ) ಯಂತೆ ಇರುತ್ತದೆ ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ 15 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ವಶಪಡಿಸಿಕೊಂಡ ವಸ್ತುಗಳಲ್ಲಿ ಟಿಪ್ಪರ್ ಲಾರಿಯನ್ನು ಹೊರತು ಪಡಿಸಿ ಉಳಿದ ವಸ್ತುಗಳನ್ನು

2 ನೇ ಆರೋಪಿಯ ಸುಪರ್ದಿಗೆ ಕೊಟ್ಟು ಆತನಿಂದ ನಿಪಿ-2 ರಂತೆ ಸ್ವೀಕೃತಿ ಪಡೆದುಕೊಂಡಿದ್ದು, ಸದರಿ ಸ್ವೀಕೃತಿಯಲ್ಲಿರುವ ತನ್ನ ಸಹಿಯು ನಿಪಿ-2(ಎ) ಯಂತೆ ಹಾಗೂ ತಾನು ಗುರುತಿಸಿರುವ ಸಹಿಯು ನಿಪಿ-2(ಬಿ) ಯಂತೆ ಇರುತ್ತದೆ ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 16 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ಟಿಪ್ಪರ್ ಲಾರಿಯನ್ನು ಪೊಲೀಸರ ಸುಪರ್ದಿಗೆ ಕೊಟ್ಟು ಅವರಿಂದ ನಿಪಿ-3 ರಂತೆ ಸ್ವೀಕೃತಿ ಪಡೆದುಕೊಂಡಿದ್ದು, ಸದರಿ ಸ್ವೀಕೃತಿ ಪತ್ರದಲ್ಲಿರುವ ತನ್ನ ಸಹಿಯು ನಿಪಿ-3(ಎ) ಯಂತೆ ಹಾಗೂ ತಾನು ಗುರುತಿಸಿರುವ ಸಹಿಯು ನಿಪಿ-3(ಬಿ) ಯಂತೆ ಇರುತ್ತದೆ ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ 17 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ಸರ್ವೇ ನಂಬ್ರ 72/1 ಮತ್ತು 62/1 ರ ಜಮೀನಿನ ಸಂಪೂರ್ಣ ಸರ್ವೇ ಮಾಡಿದ್ದು, ಅದು ಪೂರ್ಣಗೊಳ್ಳದೇ ಇರುವುದರಿಂದ ದಿನಾಂಕಃ 12.07.2017 ರಂದು ಮುಂದುವರೆಸಿ ಸರ್ವೇ ಕೆಲಸ ಮುಗಿಸಿರುತ್ತೇವೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ 18 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ಸರ್ವೇ ನಂಬ್ರ 72/1 ಮತ್ತು 62/1 ರ ಜಮೀನಿನ ಸರ್ವೇ ನಡೆಸಲು ಗಣಿ ಇಲಾಖೆಯ ಉಪ ನಿರ್ದೇಶಕರು ನೀಡಿರುವ ನೋಟೀಸ್ ಪ್ರತಿ ಹಾಜರು ಪಡಿಸಿದ್ದು, ಅದನ್ನು ನಿಪಿ-4 ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ 19 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ದಿನಾಂಕಃ 12.07.2017 ರಂದು ಘಟನಾ ಸ್ಥಳದಲ್ಲಿ ಇದ್ದ JS-140 excavator ನೆಲ್ಯಾಡಿ ಪೊಲೀಸ್ ಹೊರ ಠಾಣೆಗೆ ಕಳುಹಿಸಿಕೊಟ್ಟಿದ್ದು ಹಾಗೂ PC-71 excavator ಕೀ ಇಲ್ಲದೇ ಇದ್ದುದರಿಂದ ಪೊಲೀಸರಿಗೆ ಹಸ್ತಾಂತರಿಸದಿರುವ ಕುರಿತು ನಿಪಿ-5 ರಂತೆ ಮಹಜರ್ ತಯಾರಿಸಿದ್ದು, ಅದರಲ್ಲಿರುವ ತನ್ನ ಸಹಿಯು ನಿಪಿ-5(ಎ) ಯಂತೆ ಇರುತ್ತದೆ ಎಂದು ಗುರುತಿಸಿ ಸಾಕ್ಷ್ಯ

ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ20 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ಅದೇ ದಿನ 2 ನೇ ಆರೋಪಿಯ ಹೇಳಿಕೆಯನ್ನು ಪಡೆದುಕೊಂಡಿದ್ದು, JS-140 excavator ನೆಲಾಡಿ ಪೊಲೀಸ್ ಹೊರ ಠಾಣೆಗೆ ಕೊಟ್ಟ ಬಗ್ಗೆ ಪೊಲೀಸರು ನಿಪಿ-6 ರಂತೆ ರಸೀದಿ ನೀಡಿದ್ದು, ಅದರಲ್ಲಿರುವ ತನ್ನ ಸಹಿಯು ನಿಪಿ-6(ಎ) ಯಂತೆ ಇರುತ್ತದೆ ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರ.ನಂಃ 21 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ದಿನಾಂಕಃ 13.07.2017 ರಂದು ಬೆಳಿಗ್ಗೆ 10.00 ಗಂಟೆಗೆ ಸ್ಥಳಕ್ಕೆ ತಾನು, ಶ್ರೀಜಿತ್, ಕೇಶವ, ಕಂದಾಯ ಇಲಾಖೆಯಿಂದ ರಫೀಕ್ ಹೋಗಿದ್ದು, JS-140 excavator ಸ್ಥಳದಲ್ಲಿ ಇಲ್ಲದೇ ಇದ್ದು, ಆರೋಪಿ ಮನೆಯ ಹತ್ತಿರದ ಸರಕಾರಿ ಜಾಗದಲ್ಲಿ ಅಡಗಿಸಿ ಇಡಲಾಗಿದ್ದು, ನಂತರ ಅದನ್ನು ನೆಲಾಡಿ ಪೊಲೀಸ್ ಹೊರ ಠಾಣೆಗೆ ಹಸ್ತಾಂತರಿಸಿದ್ದು, ಅಲ್ಲಿ ನಿಪಿ-7 ರಂತೆ ಮಹಜರ್ ಮಾಡಿದ್ದು, ಅದರಲ್ಲಿರುವ ತನ್ನ ಸಹಿಯು ನಿಪಿ-7(ಎ) ಯಂತೆ ಇರುತ್ತದೆ ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ22 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ JS-140 excavator ನೆಲಾಡಿ ಪೊಲೀಸ್ ಹೊರ ಠಾಣೆಗೆ ಕೊಟ್ಟ ಬಗ್ಗೆ ಪೊಲೀಸರು ನಿಪಿ-8 ರಂತೆ ರಸೀದಿ ನೀಡಿದ್ದು, ಅದರಲ್ಲಿರುವ ತನ್ನ ಸಹಿಯು ನಿಪಿ-8(ಎ) ಯಂತೆ ಇರುತ್ತದೆ ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 23 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ದಿನಾಂಕಃ 15.07.2017 ರಂದು ಬೆಳಿಗ್ಗೆ 10.00 ಗಂಟೆಗೆ ಸ್ಥಳಕ್ಕೆ ತಾನು, ಶ್ರೀಜಿತ್, ಕೇಶವ, ಕಂದಾಯ ಇಲಾಖೆಯಿಂದ ರಫೀಕ್ ಹೋಗಿದ್ದು, PC-71 excavator ನ್ನು ನೆಲಾಡಿ ಪೊಲೀಸ್ ಹೊರ ಠಾಣೆಗೆ ಹಸ್ತಾಂತರಿಸಿದ ಬಗ್ಗೆ ನಿಪಿ-9 ರಂತೆ ಮಹಜರ್ ಮಾಡಿದ್ದು, ಅದರಲ್ಲಿರುವ ತನ್ನ ಸಹಿಯು ನಿಪಿ-9(ಎ) ಯಂತೆ ಇರುತ್ತದೆ ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ.

ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 24 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ PC-71 excavator ನೆಲಾಡಿ ಪೊಲೀಸ್ ಹೊರ ಠಾಣೆಗೆ ಕೊಟ್ಟ ಬಗ್ಗೆ ಪೊಲೀಸರು ನಿಪಿ-10 ರಂತೆ ರಸೀದಿ ನೀಡಿದ್ದು, ಅದರಲ್ಲಿರುವ ತನ್ನ ಸಹಿಯು ನಿಪಿ-10(ಎ) ಯಂತೆ ಇರುತ್ತದೆ ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 25 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ದಿನಾಂಕಃ17.07.2017 ರಂದು ನಿಪಿ-11 ರಂತೆ ಸ್ಥಳ ಪರಿಶೀಲನಾ ವರದಿಯನ್ನು ತಯಾರಿಸಿದ್ದು, ಅದರಲ್ಲಿರುವ ತನ್ನ ಸಹಿಯು ನಿಪಿ-11(ಎ) ಯಂತೆ ಇರುತ್ತದೆ ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 26 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ 01.07.2017 ರಂದು ತಾನು ತೆಗೆದಿದ್ದ ಫೋಟೋಗಳನ್ನು ನಿಪಿ-12 ಎಂದು ಗುರುತಿಸಿದ್ದು, ತಾನು ನಿಪಿ-13 ರಂತೆ ದೂರನ್ನು ನೀಡಿದ್ದು, ಅದರಲ್ಲಿರುವ ತನ್ನ ಸಹಿಯು ನಿಪಿ-13(ಎ) ಯಂತೆ ಇರುತ್ತದೆ ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ27 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ 1 ನೇ ಆರೋಪಿಯಾದ ನಿಮಗೆ ನೀಡಿದ ಕಲ್ಲು ಗಣಿಗಾರಿಕೆ ಗುತ್ತಿಗೆ ಕರಾರು ಪ್ರತಿಯನ್ನು ನಿಪಿ-14 ಎಂದು, ಕೆ. ಪ್ರಕಾಶ್ ಅನ್ನುವವನಿಗೆ ನೀಡಿದ ಕಲ್ಲು ಗಣಿಗಾರಿಕೆ ಗುತ್ತಿಗೆ ಕರಾರು ಪ್ರತಿಯನ್ನು ನಿಪಿ-15 ಎಂದು, 1 ನೇ ಆರೋಪಿಯಾದ ನಿಮಗೆ ನೀಡಿದ್ದ ಗುತ್ತಿಗೆ ರದ್ದು ಮಾಡಿದ ಆದೇಶದ ಪ್ರತಿಯನ್ನು ನಿಪಿ-16 ಎಂದು, ಪರಿಷ್ಕರಣಾ ಅರ್ಜಿಯನ್ನು ಪುರಸ್ಕರಿಸಿದ ದಾಖಲೆಯ ಪ್ರತಿಯನ್ನು ನಿಪಿ-17 ಎಂದು, 2 ನೇ ಆರೋಪಿಗೆ ಕ್ರಶರ್ ಘಟಕ ಹಾಕಿಸಲು ಸಲ್ಲಿಸಿದ್ದ ಅರ್ಜಿ ವಜಾ ಆದ ಕುರಿತು ದಾಖಲೆಯ ಪ್ರತಿಯನ್ನು ನಿಪಿ-18 ಎಂದು, 1 ನೇ ಆರೋಪಿಯಾದ ನಿಮಗೆ ಗಣಿ ಇಲಾಖೆ ಉಪ ನಿರ್ದೇಶಕ ಇವರು ನೀಡಿದ್ದ ನೋಟೀಸಿನ ಪ್ರತಿಯನ್ನು ನಿಪಿ-19 ಎಂದು, 1 ನೇ ಆರೋಪಿಯಾದ ನೀವು ಗಣಿ ಮತ್ತು ಭೂ ವಿಜ್ಞಾನ

ಇಲಾಖೆಗೆ ನೀಡಿರುವ ದಂಡ ಹಣ ತುಂಬಿದ ಕುರಿತು ಎರಡು ಮಾಹಿತಿ ಪತ್ರಗಳನ್ನು ನಿಪಿ-20 ಮತ್ತು ನಿಪಿ-21 ಎಂದು, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ 1 ನೇ ಆರೋಪಿಯಾದ ನಿಮಗೆ ರೂ.3,60,000/- ದಂಡ ತುಂಬಲು ನೀಡಿರುವ ನೋಟೀಸಿನ ಪ್ರತಿಯನ್ನು ನಿಪಿ-22 ಎಂದು ಗುರುತಿಸಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ28 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ದಿನಾಂಕಃ 03.03.2018 ರಂದು ಅರಣ್ಯ ಇಲಾಖೆಯವರು, ಕಂದಾಯ ಇಲಾಖೆಯಿಂದ ಪ್ರತೀಶ್, ಸರ್ವೇ ಇಲಾಖೆಯಿಂದ ಪ್ರಕಾಶ್, ಗಣಿ ಇಲಾಖೆಯಿಂದ ತಾನು ಮತ್ತು ಮಹದೇವಪ್ಪ ಕಲ್ಲು ಗಣಿಗಾರಿಕೆ ನಡೆಸಿದ್ದ ಹೊಂಡದ ಅಳತೆ ಮಾಡಿದ್ದು, ಸರ್ವೇ ನಂಬ್ರ 62/1 ರಲ್ಲಿ 23 ಸೆಂಟ್ಸ್ ನಷ್ಟು ಜಾಗದಲ್ಲಿ 4 ಮೀಟರ್ ಆಳದವರೆಗೆ ಅಕ್ರಮ ಗಣಿಗಾರಿಕೆ ಮಾಡಿ 7,448 MT ಕಟ್ಟಡ ಕಲ್ಲು ತೆಗೆದಿರುವುದು ಕಂಡು ಬಂದಿದ್ದು, ಸರ್ವೇ ನಂಬ್ರ 62/2 ರಲ್ಲಿ 17 ಸೆಂಟ್ಸ್ ನಷ್ಟು ಜಾಗದಲ್ಲಿ 4 ಮೀಟರ್ ಆಳದವರೆಗೆ ಅಕ್ರಮ ಗಣಿಗಾರಿಕೆ ಮಾಡಿ 5,505 MT ಕಟ್ಟಡ ಕಲ್ಲು ತೆಗೆದಿರುವುದು ಕಂಡು ಬಂದಿದ್ದು, ಸರ್ವೇ ನಂಬ್ರ 120 ರಲ್ಲಿ 49 ಸೆಂಟ್ಸ್ ನಷ್ಟು ಜಾಗದಲ್ಲಿ 6 ಮೀಟರ್ ಆಳದವರೆಗೆ ಅಕ್ರಮ ಗಣಿಗಾರಿಕೆ ಮಾಡಿ 23,803 MT ಕಟ್ಟಡ ಕಲ್ಲು ತೆಗೆದಿರುವುದು ಕಂಡು ಬಂದಿದ್ದು, ಸರ್ವೇ ನಂಬ್ರ 72/1 ರಲ್ಲಿ 24 ಸೆಂಟ್ಸ್ ನಷ್ಟು ಜಾಗದಲ್ಲಿ 12 ಮೀಟರ್ ಆಳದವರೆಗೆ ಅಕ್ರಮ ಗಣಿಗಾರಿಕೆ ಮಾಡಿ 32,000 MT ಕಟ್ಟಡ ಕಲ್ಲು ತೆಗೆದಿರುವುದು ಕಂಡು ಬಂದಿದ್ದು, ಅಕ್ರಮ ಗಣಿಗಾರಿಕೆ ಮಾಡಿದ್ದರಿಂದ ರೂ.2,28,30,816/- ನಷ್ಟ ಆಗಿದೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 29 ಅದೇ ಸಾಕ್ಷಿ ರವರು ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ಕಲ್ಲು ಗಣಿಗಾರಿಕೆ ನಡೆದ ಸ್ಥಳದ ಅಳತೆ ಮಾಡುವ ಸಮಯದಲ್ಲಿ ಫೋಟೋಗಳನ್ನು ತೆಗೆದಿದ್ದು, ಅದನ್ನು ನಿಪಿ-23 ಎಂದು ಗುರುತಿಸಿದ್ದು, ಆ ಸಮಯದಲ್ಲಿ ನಿಪಿ-24 ರಂತೆ ಮಹಜರು ತಯಾರಿಸಿದ್ದು, ಅದರಲ್ಲಿರುವ ತನ್ನ ಸಹಿಯು ನಿಪಿ-24(ಎ) ಯಂತೆ ಇರುತ್ತದೆ ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ30 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ಅಕ್ರಮ ಗಣಿಗಾರಿಕೆ ಮಾಡಿದ ಸ್ಥಳದ ಅಳತೆ ಹಾಗೂ ಅದರಿಂದ ಆದ ಅಂದಾಜು ನಷ್ಟದ ವಿವರ

ಪಟ್ಟಿ ತಯಾರಿಸಿದ್ದು, ಸದರಿ ವಿವರ ಪಟ್ಟಿಯನ್ನು ನಿಪಿ-25 ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 31 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ಹೆಚ್ಚುವರಿ ವರದಿಯನ್ನು ನಿಪಿ-26 ಮತ್ತು ನಿಪಿ-26(ಎ) ರಂತೆ ನ್ಯಾಯಾಲಯಕ್ಕೆ ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 32 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ತಾನು ತೆಗೆದ ಫೋಟೋಗಳ ಕುರಿತು ನಿಪಿ-27 ಮತ್ತು ನಿಪಿ-28 ರಂತೆ ಎರಡು ಸಿಡಿಗಳನ್ನು ತಯಾರಿಸಿದ್ದು ಹಾಗೂ ಈ ಕುರಿತು ನಿಪಿ-29 ರಂತೆ ದೃಢೀಕರಣ ಪತ್ರವನ್ನು ನೀಡಿದ್ದು, ಅದರಲ್ಲಿರುವ ತನ್ನ ಸಹಿಯು ನಿಪಿ-29(ಎ) ಯಂತೆ ಇರುತ್ತದೆ ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 33 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ಸರ್ವೇ ನಂಬ್ರ 62/1, ಸರ್ವೇ ನಂಬ್ರ 62/2, ಸರ್ವೇ ನಂಬ್ರ 120, ಸರ್ವೇ ನಂಬ್ರ 121, ಸರ್ವೇ ನಂಬ್ರ 72/1 ಜಮೀನಿನಲ್ಲಿ ಅರಣ್ಯ ಇಲಾಖೆ, ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ಎಷ್ಟು ವಿಸ್ತೀರ್ಣದಲ್ಲಿ ಅಕ್ರಮ ಗಣಿಗಾರಿಕೆ ನಡೆಸಲಾಗಿದೆ ಅನ್ನುವ ಕುರಿತು ಬೆಳ್ತಂಗಡಿ ತಹಶೀಲ್ದಾರ್ ಇವರು ಸರ್ವೇ ಮ್ಯಾಪ್ ತಯಾರಿಸಿ ವರದಿ ನೀಡಿದ್ದು, ಸದರಿ ಮ್ಯಾಪನ್ನು ನಿಪಿ-30 ಮತ್ತು ವರದಿಯನ್ನು ನಿಪಿ-31 ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 34 ಫ್ರಾಸಾ-2 ಶ್ರೀ ಕೇಶವ ರವರು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ತಾನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ 2014 ರಿಂದ ವಾಹನ ಚಾಲಕನಾಗಿ ಕೆಲಸ ಮಾಡುತ್ತಿದ್ದು ಮಹಾದೇವಪ್ಪ, ಶ್ರೀಜಿತ್ (ಚಾಸಾ-1, ಚಾಸಾ-3) ಇವರ ಪರಿಚಯವಿದ್ದು, 1 ನೇ ಆರೋಪಿಯಾದ ನಿಮ್ಮ ಹಾಗೂ 2 ನೇ ಆರೋಪಿಯ ಪರಿಚಯ ಇರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ35 ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ದಿನಾಂಕಃ 13.07.2017 ರಂದು ಬೆಳ್ತಂಗಡಿ ತಾಲೂಕಿನ ಮುಗ್ರು ಗ್ರಾಮದ ಸರ್ವೇ ನಂಬ್ರ 72/1 ರ ಕಪ್ಪು ಕಲ್ಲು ಕೋರೆ ಹತ್ತಿರ ಮಹಜರ್ ಮಾಡಿದ್ದು, ಅಲ್ಲಿ ಗಣಿಗಾರಿಕೆ ಮಾಡಲಾಗುತ್ತಿದೆ ಎಂದು ನಿಪಿ-7 ರಂತೆ ಮಹಜರು ಮಾಡಿದ್ದು, ಸದರಿ ಮಹಜರನ್ನು ಜಿಯಾಲಿಜಿಸ್ಟ್ ಪದ್ಮಶ್ರೀ ತಯಾರಿಸಿದ್ದು, ಅದರಲ್ಲಿರುವ ತನ್ನ ಸಹಿಯು ನಿಪಿ-7(ಬಿ) ಯಂತೆ ಇರುತ್ತದೆ ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 36 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ದಿನಾಂಕಃ10.07.2017, 12.07.2017, 13.07.2017, 15.07.2017 ರಂದು ಕೋರೆಯ ಹತ್ತಿರ ಹೋಗಿದ್ದು, ದಿನಾಂಕಃ 15.07.2017 ರಂದು ಪಿಸಿ-71 ಜೆಸಿಬಿಯನ್ನು ಉಪ್ಪಿನಂಗಡಿ ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಿ ಕೊಟ್ಟಿದ್ದು, ಆ ಸಮಯದಲ್ಲಿ ನಿಪಿ-9 ರಂತೆ ಮಹಜರನ್ನು ಬರೆದಿದ್ದು, ಅದರಲ್ಲಿರುವ ತನ್ನ ಸಹಿಯು ನಿಪಿ-9(ಬಿ) ಯಂತೆ ಇರುತ್ತದೆ ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 37 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ಜೆಸಿಬಿ ಆರೋಪಿತರಾದ ನಿಮಗೆ ಸಂಬಂಧಪಟ್ಟಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ38 ಫ್ರಾಸಾ-3 ಶ್ರೀ ಎಚ್.ಆರ್.ಪ್ರತೀಶ್, ರೆವಿನ್ಯೂ ಇನ್ಸಪೆಕ್ಟರ್ ರವರು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ತಾನು 2017 ರಲ್ಲಿ ಕೊಕ್ಕಡ ಹೋಬಳಿಯಲ್ಲಿ ಕಂದಾಯ ನಿರೀಕ್ಷಕರಾಗಿ ಕೆಲಸ ಮಾಡಿದ್ದು, ಆರೋಪಿಗಳಾದ ನೀವು ಬೆಳ್ತಂಗಡಿ ತಾಲೂಕಿನ ಮೊಗ್ರು ಗ್ರಾಮದವರಿದ್ದು, 1 ನೇ ಆರೋಪಿಯಾದ ನೀವು ಕ್ವಾರೆಯನ್ನು ಹಾಗೂ 2 ನೇ ಆರೋಪಿ ಕಲ್ಲು ಗಣಿಗಾರಿಕೆಯನ್ನು ಅನಧಿಕೃತವಾಗಿ ಮೊಗ್ರು ಗ್ರಾಮದಲ್ಲಿ ನಡೆಸುತ್ತಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 39 ಫ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ದಿನಾಂಕಃ 01.07.2017 ರಂದು ಉಪ ಲೋಕಾಯುಕ್ತರು ತನ್ನನ್ನು, ಗಣಿಗಾರಿಕೆ ಇಲಾಖೆ ಅಧಿಕಾರಿಗಳನ್ನು ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದ ಸರ್ವೇ ನಂಬ್ರ 62/1 ಮತ್ತು 62/2 ಕ್ಕೆ ಮಧ್ಯಾಹ್ನ 12.30 ಕ್ಕೆ ಕರೆಯಿಸಿದ್ದು, ಅಲ್ಲಿ 1 ನೇ ಆರೋಪಿಯಾದ ನೀವು ಮತ್ತು 2 ನೇ ಆರೋಪಿ, ಗಣಿ ಇಲಾಖೆಯವರು, ಪಂಚಾಯತಿಯವರು, ಗ್ರಾಮ ಲೆಕ್ಕಾಧಿಕಾರಿ, ಸಾರ್ವಜನಿಕರು ಇದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ40 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ಅಲ್ಲಿ 1 excavator 71, 1 ಜೆಸಿಬಿ, 1 ಟಿಪ್ಪರ್, ದಪ್ಪ ಜಲ್ಲಿ, ಸಣ್ಣ ಜಲ್ಲಿ, ಬೋಡ್ರಸ್ ಇದ್ದು, ತಾನು 2 ನೇ ಆರೋಪಿಯ ಮನೆಯ ಹತ್ತಿರ ಇದ್ದ ಸರ್ವೆ ನಂಬ್ರ 72/1 ರ ಕ್ವಾರೆಗೆ ಹೋಗಿದ್ದು, ತನ್ನನ್ನು ಗಣಿಗಾರಿಕೆ ಮಾಡುತ್ತಿದ್ದ ಪ್ರದೇಶ ಸರ್ಕಾರಿ ಜಮೀನೋ ಅಥವಾ ಖಾಸಗಿ ಜಮೀನೋ ಎಂದು ತಿಳಿದುಕೊಳ್ಳಲು ಕರೆಯಿಸಿದ್ದು, ಕ್ರಶರ್ ಇದ್ದ ಅರ್ಧ ಜಾಗ ಖಾಸಗಿ ಹಾಗೂ ಇನ್ನೂ ಅರ್ಧ ಸರ್ಕಾರಿ ಜಮೀನು ಆಗಿದ್ದು, ಸರ್ವೆ ನಂಬ್ರ 72 ನ್ನು ಅಳತೆ ಮಾಡಬೇಕೆಂದು ಹೇಳಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 41 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ದಿನಾಂಕಃ 10.07.2017 ರಂದು ಗಣಿಗಾರಿಕೆ ಇಲಾಖೆಯ ಪದ್ಮಶ್ರೀ, ಅರಣ್ಯ ಇಲಾಖೆಯ ರಾಥೋಡ್, ಕಂದಾಯ ಇಲಾಖೆಯ ತಾನು, ಸರ್ವೆ ಇಲಾಖೆಯ ಪ್ರಕಾಶ್ ಅಲ್ಲಿಗೆ ಹೋಗಿದ್ದು, ಅಲ್ಲಿ 1 ನೇ ಆರೋಪಿಯಾದ ನೀವು ಮತ್ತು 2 ನೇ ಆರೋಪಿ ಹಾಗೂ ದಪ್ಪ ಜಲ್ಲಿ, ಸಣ್ಣ ಜಲ್ಲಿ, ಡಸ್ಟ್ ಬೋಡ್ರಸ್ ಇದ್ದವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 42 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ಲಾರಿಯನ್ನು ಉಪ್ಪಿನಂಗಡಿ ಪೊಲೀಸರ ವಶಕ್ಕೆ ನೀಡಿದ್ದು, ಉಳಿದ ವಾಹನಗಳನ್ನು 2 ನೇ ಆರೋಪಿಯ ವಶಕ್ಕೆ ನೀಡಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂ: 43 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ಪ್ರಕಾಶ್ ರವರು ಅಳತೆ ಮಾಡುವಾಗ ತಾನು ಸಹಕರಿಸಿದ್ದು, ಬೆಳಿಗ್ಗೆ 11.00 ರಿಂದ ಸಂಜೆಯವರೆಗೂ ಈ ಕೆಲಸ ಮಾಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂ: 44 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ನಿಪಿ-1 ದಾಖಲೆಯಲ್ಲಿರುವ ತನ್ನ ಸಹಿಯು ನಿಪಿ-1(ಬಿ) ಯಂತೆ ಇರುತ್ತದೆ ಎಂದು ಹಾಗೂ ಫೋಟೋಗಳನ್ನು ನಿಪಿ-12 ರಂತೆ ತೆಗೆದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ ಸುಳ್ಳು

ಪ್ರ.ನಂ: 45 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ದಿನಾಂಕಃ 12.07.2017 ರಂದು ಗಣಿಗಾರಿಕೆ, ಅರಣ್ಯ, ಕಂದಾಯ ಮತ್ತು ಸರ್ವೇ ಇಲಾಖೆಯವರು, ಆರೋಪಿಗಳು ಅಲ್ಲಿಗೆ ಹೋಗಿದ್ದು, 1 ಜೆಸಿಬಿಯನ್ನು ಉಪ್ಪಿನಂಗಡಿ ಪೊಲೀಸ್ ಠಾಣೆಗೆ ಹಸ್ತಾಂತರಿಸಿದ್ದು, ಅಲ್ಲಿ ಮಹಜರ್ ಮಾಡಿದ್ದು, ಅಲ್ಲಿ ಸಾಯಂಕಾಲ 5.00 ಗಂಟೆಯವರಗೆ ಇದ್ದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂ: 46 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ದಿನಾಂಕಃ 03.03.2018 ರಂದು ಬೆಳಿಗ್ಗೆ ಗಣಿಗಾರಿಕೆ, ಅರಣ್ಯ, ಕಂದಾಯ ಮತ್ತು ಸರ್ವೇ ಇಲಾಖೆಯವರು, ಆರೋಪಿಗಳಾದ ನೀವುಗಳು ಮತ್ತೆ ಅಲ್ಲಿಗೆ ಹೋಗಿದ್ದು, ಕಲ್ಲು ಗಣಿಗಾರಿಕೆ ಮಾಡಿದ ಸ್ಥಳದ ನೀರು ಕಡಿಮೆ ಆಗಿದ್ದು ಕೋಲನ್ನು ಹಾಕಿ ಅಳತೆ ಮಾಡಿದ್ದು, ನಿಪಿ-23 ರಂತೆ ಫೋಟೋಗಳನ್ನು ಸದರಿ ಸ್ಥಳದಲ್ಲಿ ತೆಗೆದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂ: 47 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ಸರ್ವೇ ನಂಬ್ರ 72 ರಲ್ಲಿ 1 ಸರ್ಕಾರಿ ಸರ್ವೇ ನಂಬ್ರ, 62 ರಲ್ಲಿ 1 ಸರ್ಕಾರಿ ಸರ್ವೇ ನಂಬ್ರ, ಸರ್ವೇ ನಂಬ್ರ 62 ರಲ್ಲಿ ಸ್ವಲ್ಪ ಜಾಗ 2 ನೇ ಆರೋಪಿಯ ಜಾಗ, ಸರ್ವೇ ನಂಬ್ರ 121 ರಲ್ಲಿ ಖಾಸಗಿ ಜಾಗದಲ್ಲಿ ಸಹ ಅಕ್ರಮ ಗಣಿಗಾರಿಕೆ ಆಗಿದ್ದು, ಅಲ್ಲಿ ನಿಪಿ-24 ರಂತೆ ಮಹಜರು ಮಾಡಿದ್ದು, ಅದರಲ್ಲಿರುವ ತನ್ನ ಸಹಿಯು ನಿಪಿ-24(ಬಿ) ಯಂತೆ ಇರುತ್ತದೆ ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ.

ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 48 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ಒಂದು ಎಕರೆಗಿಂತ ಜಾಸ್ತಿ ಜಾಗದಲ್ಲಿ (ಸರ್ಕಾರಿ ಜಮೀನು ಮತ್ತು ಆರೋಪಿಗಳ ಜಮೀನು ಇರುತ್ತದೆ) ಅಕ್ರಮ ಗಣಿಗಾರಿಕೆ ನಡೆಸಲಾಗಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 49 ಪ್ರಾಸಾ-4 ಶ್ರೀ ಮಹಾದೇವಪ್ಪ ಎಸ್. ನಿವೃತ್ತ ನೌಕರ ಇವರು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ 1 ನೇ ಆರೋಪಿಯಾದ ನಿಮಗೆ 2009 ರಿಂದ 2014 ರವರೆಗೆ ಮೊಗ್ರು ಗ್ರಾಮದ ಸರ್ವೇ ನಂಬ್ರ 72/1 ರಲ್ಲಿ ಗಣಿಗಾರಿಕೆ ಮಾಡಲು ತಮ್ಮ ಇಲಾಖೆಯಿಂದ ಅನುಮತಿ ಕೊಡಲಾಗಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 50 ಪ್ರಾಸಾ-4 ರವರು ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ಸದರಿ ಪ್ರದೇಶ ಅರಣ್ಯ ಇಲಾಖೆಯಲ್ಲಿ ಬರುತ್ತದೆ ಎಂದು ತಕರಾರು ಬಂದಿರುವುದರಿಂದ 2013 ರಲ್ಲಿ ಅನುಮತಿ ರದ್ದು ಮಾಡಲಾಗಿದ್ದು, ಅನುಮತಿ ರದ್ದು ಪಡಿಸಿದ ನಂತರ ಅನಧಿಕೃತವಾಗಿ 1 ನೇ ಆರೋಪಿಯಾದ ನೀವು ಗಣಿಗಾರಿಕೆ ಮಾಡುತ್ತಿದ್ದು, 2 ನೇ ಆರೋಪಿ ಸರ್ವೇ ನಂಬ್ರ 62/2 ರಲ್ಲಿ ಅನಧಿಕೃತವಾಗಿ ಕ್ರಷರ್ ಇಟ್ಟಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 51 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ಉಪಲೋಕಾಯುಕ್ತರು ತಮ್ಮ ಇಲಾಖೆಗೆ ಸ್ಥಳ ಪರಿಶೀಲನೆ ನಡೆಸುವಂತೆ ಆದೇಶ ಮಾಡಿದ್ದರಿಂದ ದಿನಾಂಕಃ10.07.2017 ರಂದು ಕಂದಾಯ ನಿರೀಕ್ಷಕರು, ಅರಣ್ಯ ಇಲಾಖೆಯ ಸಿಬ್ಬಂದಿ, ಭೂ ದಾಖಲೆ ಇಲಾಖೆಯ ಸರ್ವೆಯರ್, ತಮ್ಮ ಇಲಾಖೆಯ ಭೂ ವಿಜ್ಞಾನಿ ಸೇರಿ ತಪಾಸಣೆ ನಡೆಸಿದ್ದು ಕ್ರಷರ್ ಹತ್ತಿರ 200 MT ಸೋಲಿಂಗ್ ಕಲ್ಲುಗಳು, 100 MT 40mm ಜಲ್ಲಿ, 300 MT 20 mm ಜಲ್ಲಿ, 10 MT ಡಸ್ಟ್ ಇತ್ತು. ಕೆಎ-16-ಎ-5020 ಟಿಪ್ಪರ್ ಲಾರಿ, PC71 ಎಸ್ಕವೇಟರ್, JS140 ಎಸ್ಕವೇಟರ್, ಅನಧಿಕೃತ ಕಲ್ಲು ಗಣಿಗಾರಿಕೆ ನಡೆಯುತ್ತಿದ್ದ ಸ್ಥಳದಲ್ಲಿ 1 ಜೆಸಿಬಿ ಇತ್ತು ಎಂದು

ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 52 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ಟಿಪ್ಪರ್ ಲಾರಿಯನ್ನು ಉಪ್ಪಿನಂಗಡಿ ಪೊಲೀಸರ ವಶಕ್ಕೆ ಮತ್ತು ಉಳಿದ ವಸ್ತುಗಳನ್ನು 2 ನೇ ಆರೋಪಿಯ ವಶಕ್ಕೆ ಕೊಟ್ಟಿದ್ದು, ಕಲ್ಲು ಗಣಿಯಲ್ಲಿ ನೀರು ತುಂಬಿದ್ದರಿಂದ ಮಳೆಗಾಲ ಮುಗಿಯುವವರೆಗೆ ಸರ್ವೆ ಕೆಲಸವನ್ನು ಮುಂದೂಡಿದ್ದು, ಅಲ್ಲಿ ಭೂ ವಿಜ್ಞಾನಿ ನಿಪಿ-1 ರಂತೆ ಮಹಜರ್ ತಯಾರಿಸಿದ್ದು, ಸದರಿ ಮಹಜರಿನಲ್ಲಿರುವ ತನ್ನ ಸಹಿಯು ನಿಪಿ-1(ಸಿ) ಯಂತೆ ಇರುತ್ತದೆ ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 53 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ದಿನಾಂಕ 03.03.2018 ರಂದು ಮತ್ತೆ ಸರ್ವೆಗೆ ಹೋಗಿದ್ದು ಅಲ್ಲಿ ಗುಂಡಿಗಳನ್ನು ಪರಿಶೀಲಿಸಿದ್ದು, ನಾಲ್ಕು ಗುಂಡಿಗಳಿಂದ 1.33 ಎಕರೆ ಪ್ರದೇಶದಲ್ಲಿ ಗಣಿಗಾರಿಕೆ ಮಾಡಿ 76,101 MT ಕಲ್ಲನ್ನು ತೆಗೆಯಲಾಗಿದೆ ಎಂದು ಅಂದಾಜಿಸಲಾಗಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 54 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ನಿಪಿ-24 ರಂತೆ ಮಹಜರನ್ನು ಸದರಿ ಸ್ಥಳದಲ್ಲಿ ಮಾಡಲಾಗಿದ್ದು, ಅದರಲ್ಲಿರುವ ತನ್ನ ಸಹಿಯು ನಿಪಿ-24(ಸಿ) ಯಂತೆ ಇರುತ್ತದೆ ಎಂದು ಹಾಗೂ ಫೋಟೋಗಳನ್ನು ನಿಪಿ-24 ರಂತೆ ತೆಗೆದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 55 ಫ್ರಾಸಾ-5 ಶ್ರೀ ರಫೀಕ್, ಗ್ರಾಮ ಲೆಕ್ಕಾಧಿಕಾರಿ, ಬಂದಾರು ಗ್ರಾಮ, ಬೆಳ್ತಂಗಡಿ ರವರು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ದಿನಾಂಕಃ 13.07.2017 ರಂದು ಉಪ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಇವರು ಮೊಗ್ರು ಗ್ರಾಮದ ಸರ್ವೆ ನಂಬ್ರ 72/1 ಕ್ಕೆ ಬಂದಿದ್ದು, ಆ ದಿನ ತಹಶೀಲ್ದಾರ್ ರವರು ತನಗೆ ಅವರೊಂದಿಗೆ ಹಾಜರಿರುವಂತೆ ತಿಳಿಸಿದ್ದು, ಅವರು ಆ ಜಮೀನಿನಲ್ಲಿ ಯಂತ್ರಗಳನ್ನು ಮತ್ತು ದಾಸ್ತಾನನ್ನು ಪರಿಶೀಲಿಸಿದ್ದು ಅಲ್ಲಿ ಕಲ್ಲು ಇದ್ದು, ಅದು ಕಲ್ಲು ಗಣಿಗಾರಿಕೆ ನಡೆದ ಪ್ರದೇಶ ಆಗಿತ್ತು ಎಂದು

ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 56 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ಜೆಸಿಬಿ JS140 ಯಂತ್ರ ಯೋಗೀಶ್ ಪೂಜಾರಿ ಇವರ ಮನೆಯ ಹತ್ತಿರ ಇದ್ದು, ಅದರ ವೈರ್ ಗಳು ತುಂಡಾಗಿದ್ದು, ಅದನ್ನು ರಿಪೇರಿ ಮಾಡಿಸಿಕೊಂಡು ಉಪ್ಪಿನಂಗಡಿ ಪೊಲೀಸ್ ಠಾಣೆಯ ಸುಪರ್ದಿಗೆ ನೀಡಬೇಕೆಂದು ಅಧೀನ ಸಿಬ್ಬಂದಿಗಳಿಗೆ ಹೇಳಿರುವುದಾಗಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 57 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ 12.30 ರಿಂದ 1.30 ರವರೆಗೆ ನಿಪಿ-7 ರಂತೆ ಮಹಜರ್ ಮಾಡಿದ್ದು, ಸದರಿ ಮಹಜರಿನಲ್ಲಿರುವ ತನ್ನ ಸಹಿಯು ನಿಪಿ-7(ಸಿ) ಯಂತೆ ಇರುತ್ತದೆ ಎಂದು ಗುರುತಿಸಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 58 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ದಿನಾಂಕಃ 15.07.2017 ರಂದು ಮೊಗ್ರು ಗ್ರಾಮದ ಸರ್ವೇ ನಂಬ್ರ 62/2 ರಲ್ಲಿದ್ದ PC71 ಯಂತ್ರವನ್ನು ವಶಪಡಿಸಿಕೊಳ್ಳುವ ಮಹಜರನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಉಪ ನಿರ್ದೇಶಕರು 10.15 ರಿಂದ 11.15 ರವರೆಗೆ ನಿಪಿ-9 ರಂತೆ ಮಾಡಿದ್ದು, ಸದರಿ ಮಹಜರಿನಲ್ಲಿರುವ ತನ್ನ ಸಹಿಯು ನಿಪಿ-9(ಸಿ) ಯಂತೆ ಇರುತ್ತದೆ ಎಂದು ಗುರುತಿಸಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 59 ಪಾಸಾ-6 ಶ್ರೀ ಪ್ರಕಾಶ್, ಸರ್ಕಾರಿ ಭೂಮಾಪಕ, ಸುಳ್ಯ ರವರು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ದಿನಾಂಕಃ10.07.2017 ರಂದು ಬೆಳ್ತಂಗಡಿ ತಾಲೂಕಿನ ಮೊಗ್ರು ಗ್ರಾಮದ ಸರ್ವೇ ನಂಬರ್ 72/1 ಮತ್ತು ಸರ್ವೇ ನಂಬರ್ 62/2 ರ ಸರ್ವೇ ಮಾಡುವುದಕ್ಕಾಗಿ ತಹಶೀಲ್ದಾರ್ ತನ್ನನ್ನು ಕರೆಯಿಸಿದ್ದು, ಸದರಿ ಜಮೀನುಗಳನ್ನು ಅಳತೆ ಮಾಡಿದ್ದು, ಸರ್ವೇ ನಂಬರ್ 72/1 ಇದು ಸರ್ಕಾರಿ ಜಮೀನು ಆಗಿದ್ದು ಸರ್ವೇ ನಂಬರ್ 62/2 ಇದು ಖಾಸಗಿ ಜಮೀನು ಆಗಿದ್ದು, ಸರ್ವೇ ನಂಬರ್ 72/1 ರಲ್ಲಿ ಕಲ್ಲು ಗಣಿಗಾರಿಕೆ ನಡೆಸಲಾಗಿತ್ತು ಎಂದು ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 60 ಫ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ಸರ್ವೇ ನಂಬರ್ 72/1 ರಲ್ಲಿ ಕಲ್ಲು ಗಣಿಗಾರಿಕೆಗೆ ಬಳಸಿದ್ದ ಯಂತ್ರೋಪಕರಣಗಳನ್ನು ಗಣಿ ಇಲಾಖೆಯವರು ವಶಪಡಿಸಿಕೊಂಡಿದ್ದು, ಅವರು ಸಾಯಂಕಾಲ 5.00 ರಿಂದ 6.15 ರವರೆಗೆ ನಿಪಿ-1 ರಂತೆ ಮಹಜರ್ ತಯಾರಿಸಿದ್ದು, ಸದರಿ ಮಹಜರಿಗೆ ತಾನು ನಿಪಿ-1(ಡಿ) ರಂತೆ ಸಹಿ ಮಾಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 61 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ದಿನಾಂಕಃ 12.07.2017 ರಂದು ಮತ್ತೆ ಸರ್ವೇ ಕೆಲಸಕ್ಕೆ ಕರೆಯಿಸಿದ್ದು, ತಾನು ಆ ದಿನ ಎರಡು ಜಮೀನುಗಳ ಸರ್ವೇ ಕೆಲಸವನ್ನು ಮಾಡಿದ್ದು, ಆ ದಿನ ಅವರು ಮಧ್ಯಾಹ್ನ 3.00 ರಿಂದ 3.40 ರವರೆಗೆ ನಿಪಿ-5 ರಂತೆ ಮಹಜರನ್ನು ತಯಾರಿಸಿದ್ದು, ತಾನು ಸದರಿ ಮಹಜರಿಗೆ ನಿಪಿ-5(ಬಿ) ರಂತೆ ಸಹಿ ಮಾಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 62 ಫ್ರಾಸಾ-7 ಶ್ರೀ ಆನಂದ್ ರಾಥೋಡ್, ಉಪ ವಲಯ ಅರಣ್ಯಾಧಿಕಾರಿ, ದಾಂಡೇಲಿ ವಲಯ ರವರು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ದಿನಾಂಕಃ 02.07.2017 ರಂದು ಉಪ ಲೋಕಾಯುಕ್ತ ಇವರು ಗಣಿ ಇಲಾಖೆ, ಕಂದಾಯ ಇಲಾಖೆ ಹಾಗೂ ಅರಣ್ಯ ಇಲಾಖೆಯಿಂದ ಮೊಗ್ರು ಗ್ರಾಮದ ಸರ್ವೇ ನಂಬ್ರ 72/1 ಮತ್ತು 62/2 ಈ ಜಮೀನುಗಳ ಜಂಟಿ ಸರ್ವೇ ಮಾಡುವಂತೆ ಮೌಖಿಕವಾಗಿ ಆದೇಶಿಸಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 63 ಫ್ರಾಸಾ-7 ರವರು ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ದಿನಾಂಕಃ 10.07.2017 ರಂದು ಜಂಟಿ ಸರ್ವೇ ಪ್ರಾರಂಭಿಸಿದ್ದು, ಆ ಸಮಯದಲ್ಲಿ ಸ್ಥಳದಲ್ಲಿ ಇದ್ದ 200 MT ಜೆಲ್ಲಿ, 100 MT 40mm ಜೆಲ್ಲಿ, 300 MT 20mm ಜೆಲ್ಲಿ, 10 MT ಧೂಳು, 1 ಜೆಸಿಬಿ, ಪಿಸಿ 71 excavator, 1 ಟಿಪ್ಪರ್ ಗಳನ್ನು ಗಣಿ ಇಲಾಖೆಯವರು ವಶಕ್ಕೆ ಪಡೆದುಕೊಂಡಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 64 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ಅಕ್ರಮ ಕಲ್ಲು ಗಣಿಗಾರಿಕೆ ಮಾಡಲಾದ ಸ್ಥಳದ ಅಳತೆ ಮಾಡಿದ್ದು, ಸರ್ವೇ ಮಾಡಿದ ಕುರಿತು ಪಂಚನಾಮೆಯನ್ನು ತಯಾರಿಸಲಾಗಿದ್ದು ಹಾಗೂ ಫೋಟೋಗಳನ್ನು ತೆಗೆಯಲಾಗಿದ್ದು, ನಿಪಿ-1 ಮಹಜರಿನಲ್ಲಿರುವ ತನ್ನ ಸಹಿಯು ನಿಪಿ-1(ಇ) ಯಂತೆ ಇರುತ್ತದೆ ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 65 ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ದಿನಾಂಕಃ 12.07.2017 ರಂದು ಸರ್ವೇ ಕೆಲಸವನ್ನು ಮುಂದುವರೆಸಿದ್ದು, ಸರ್ವೇ ನಂಬರ್ 72/1 ರಲ್ಲಿ ಕಲ್ಲು ಗಣಿಗಾರಿಕೆ ಮಾಡಿದ್ದು, ಸರ್ವೇ ನಂಬರ್ 62/2 ಇದರಲ್ಲಿ ಕಲ್ಲು ಪುಡಿ ಮಾಡುವ ಘಟಕ (ಕ್ರಶರ್) ಇದ್ದು, ಅಲ್ಲಿ ಪಂಚನಾಮೆಯನ್ನು ತಯಾರಿಸಲಾಗಿದ್ದು, ಸದರಿ ನಿಪಿ-5 ರ ಮಹಜರಿನಲ್ಲಿರುವ ತನ್ನ ಸಹಿಯು ನಿಪಿ-5(ಸಿ) ಯಂತೆ ಇರುತ್ತದೆ ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರ.ನಂಃ 66 ನಿಮ್ಮ ಪರವಾಗಿ ಯಾರಾದರೂ ಸಾಕ್ಷಿ ಇದ್ದಾರೆಯೇ?

ಉತ್ತರಃ ಕಲಂ 313 ರ ದಂ.ಪ್ರ.ಸ. ಅಡಿಯಲ್ಲಿ ಲಿಖಿತ ಹೇಳಿಕೆ ಸಲ್ಲಿಸುತ್ತೇನೆ.

ಪ್ರ.ನಂಃ 67 ಈ ಕೇಸಿನ ಬಗ್ಗೆ ನೀವು ಏನಾದರೂ ಹೇಳುವುದು ಇದೆಯೇ?

ಉತ್ತರಃ ಇಲ್ಲ

(ಮೇಲ್ಕಂಡ ಹೇಳಿಕೆಯನ್ನು ನಾನು ಖುದ್ದಾಗಿ ಆರೋಪಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ಅವರು ಕೊಟ್ಟ ಹೇಳಿಕೆಯನ್ನು ನಾನೇ ಸ್ವತಃ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸುತ್ತೇನೆ.)

BASAVARAJ

Digitally signed by BASAVARAJ
Date: 2025.06.23 17:39:38 +0530

**(ಬಸವರಾಜ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ದ.ಕ., ಮಂಗಳೂರು.**

ಸ್ಥಳಃ ಮಂಗಳೂರು
ದಿನಾಂಕ :23/6/2025

1 ನೇ ಆರೋಪಿಯ ಸಹಿಃ